# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1208
ಸದಸ್ಯರ ಹೆಸರು : ಶ್ರೀ ಆರ್. ಧರ್ಮಸೇನ
ಉತ್ತರಿಸುವ ದಿನಾಂಕ : 20.12.2018
ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ವಿಕಲಚೇನತರಿಗೆ ಎಷ್ಟು ತ್ರಿಚಕ್ರ ವಾಹನಗಳನ್ನು ನೀಡಲಾಗಿದೆ: ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಎಷ್ಟು ಜನರಿಗೆ ನೀಡಲಾಗಿದೆ: (ತಾಲ್ಲೂಕುವಾರು ವಿವರ ನೀಡುವುದು) | ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಒಟ್ಟು 7120 ಯಂತ್ರಚಾಲಿತ ದ್ವಿಚಕ್ರವಾಹನಗಳನ್ನು ವಿತರಿಸಲಾಗಿದೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಲ್ಲಿ ವಿತರಿಸಲಾದ ಯಂತ್ರಚಾಲಿತ ದ್ವಿಚಕ್ರವಾಹನಗಳ ತಾಲ್ಲೂಕುವಾರು ಫಲಾನುಭವಿಗಳ ಸಂಖ್ಯೆಯನ್ನು ಅನುಬಂಧದಲ್ಲಿ ಒದಗಿಸಿದೆ. |
| ಆ) | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಇನ್ನೂ ಎಷ್ಟು ಜನರಿಗೆ ನೀಡಬೇಕೆಂಬ ಬೇಡಿಕೆ ಇದೆ; ಎಲ್ಲರಿಗೂ ಯಾವಾಗ ಪೂರೈಕೆ ಮಾಡಲಾಗುವುದು? | 2018-19ನೇ ಸಾಲಿಗೆ ಮೈಸೂರು ಜಿಲ್ಲೆಯಿಂದ ಒಟ್ಟು 147 ಹಾಗೂ ಚಾಮರಾಜನಗರ ಜಿಲ್ಲೆಯಿಂದ ಒಟ್ಟು 80 ಯಂತ್ರಚಾಲಿತ ವಾಹನಗಳಿಗೆ ಬೇಡಿಕೆಯಿರುತ್ತದೆ.<br>2018-19ನೇ ಸಾಲಿನಲ್ಲಿ ಒಟ್ಟು ರೂ.700.00 ಲಕ್ಷಗಳ ಆಯವ್ಯಯವನ್ನು ಯಂತ್ರಚಾಲಿತ ದ್ವಿಚಕ್ರವಾಹನಗಳ ಖರೀದಿಗೆ ನಿಗದಿಪಡಿಸಿದ್ದು, ಅಂದಾಜು 1000 ಯಂತ್ರಚಾಲಿತ ದ್ವಿಚಕ್ರವಾಹನಗಳನ್ನು ಖರೀದಿ ಮಾಡಬಹುದಾಗಿದ್ದು, ಪ್ರಸಕ್ತ ಸಾಲಿನಲ್ಲಿ ಯಂತ್ರಚಾಲಿತ ದ್ವಿಚಕ್ರವಾಹನಗಳನ್ನು ಖರೀದಿ ಮಾಡಿ ವಿತರಿಸುವ ಸಂಬಂಧ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗೆ ಪ್ರಸಕ್ತ ಸಾಲಿನ ಲಭ್ಯವಿರುವ ಆಯವ್ಯಯದನ್ವಯ ಸಂಬಂಧಿಸಿದ ಜಿಲ್ಲೆಗಳಿಗೆ ಸರ್ಕಾರ ನೀಡುವ ಅನುಮೋದನೆಯಂತೆ, ದೈಹಿಕ ವಿಕಲಚೇತನರ ಜನಸಂಖ್ಯೆವಾರು ಜಿಲ್ಲೆವಾರು ನಿಗದಿಪಡಿಸಿರುವ ಸಂಖ್ಯೆಗಳನ್ವಯ ಜಿಲ್ಲಾ ಆಯ್ಕೆ ಸಮಿತಿಯ ಮೂಲಕ ಅರ್ಹ ಫಲಾನುಭವಿಗಳಿಗೆ ದ್ವಿಚಕ್ರವಾಹನಗಳನ್ನು ಮುಂದಿನ ದಿನಗಳಲ್ಲಿ ವಿತರಿಸಲಾಗುವುದು. |

**ಸಂಖ್ಯೆ: ಮಮಇ 255 ಪಿಹೆಚ್‌ಪಿ 2018**

(ಡಾ॥ ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ,
ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಆರ್.ಧರ್ಮಸೇನ ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ: 1208ಕ್ಕೆ ಅನುಬಂಧ**

ಮೈಸೂರು ಜಿಲ್ಲೆ

| ಕ್ರ ಸಂ | ತಾಲ್ಲೂಕು | ಕಳೆದ ಮೂರು ವರ್ಷಗಳಲ್ಲಿ ವಿತರಿಸಿದ ಯಂತ್ರಚಾಲಿತ ದ್ವಿಚಕ್ರವಾಹನಗಳು |
|---|---|---|
| 1 | ಹೆಚ್.ಡಿ.ಕೋಟೆ | 50 |
| 2 | ಹುಣಸೂರು | 50 |
| 3 | ಕೆ.ಆರ್.ನಗರ | 43 |
| 4 | ನಂಜನಗೂಡು | 41 |
| 5 | ಪಿರಿಯಾಪಟ್ಟಣ | 38 |
| 6 | ತಿ.ನರಸೀಪುರ | 40 |
| 7 | ಮೈಸೂರು ತಾಲ್ಲೂಕು | 82 |
| | ಒಟ್ಟು | 344 |

ಚಾಮರಾಜನಗರ ಜಿಲ್ಲೆ

| ಕ್ರ ಸಂ | ತಾಲ್ಲೂಕು | ಕಳೆದ ಮೂರು ವರ್ಷಗಳಲ್ಲಿ ವಿತರಿಸಿದ ಯಂತ್ರಚಾಲಿತ ದ್ವಿಚಕ್ರವಾಹನಗಳು |
|---|---|---|
| 1 | ಚಾಮರಾಜನಗರ | 60 |
| 2 | ಕೊಳ್ಳೇಗಾಲ | 29 |
| 3 | ಗುಂಡ್ಲುಪೇಟೆ | 27 |
| 4 | ಯಳಂದೂರು | 14 |
| | ಒಟ್ಟು | 130 |